1	2	3
109.	ಹಾಲಿಗೇರಿ	2
110.	ನೀರಲಕೇರಿ	2
111.	ಗೊವನಕೊಪ್ಪ	1
112.	ತಳಕವಾಡ	1
113.	ಅಲೂರು ಎಸ್.ಕೆ.	1
114.	ಕಾಕನೂರು	2
115.	ಬೀರನೂರು	1
116.	ಸಾಳ್ಳ	2
117.	ಕಿತ್ತಲಿ	2
118.	ಕಳಸ	1
119.	ಚಿಮ್ಮನಕಟ್ಟಿ	2
120.	ಹವಲಮೋಡ	1
121.	ಬೆಳ್ಳಿಕಿಂಡಿ	1
		184

ಕುಂ. ಾಪುರ ತಾಲ್ಲೂಕಿನ ಆಶ್ರಯ ಯೋಜನೆಯಲ್ಲಿ ನಿಗದಿಪಡಿಸಿದ ಹಣ

123(14. ") ಶ್ರೀ ಐ.ಎಂ. ಜಯರಾಮರೆಡ್ಡಿ (ಬೈಂದೂರು):- ಮಾನ್ಯ ವಸತಿ ಸಚಿವರು ಈ ಕಿಳಕಂಡ ಪ್ರ ಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಆ ಶ್ರಯ ಯೋಜನೆಯಡಿಯಲ್ಲಿ ಸರ್ಕಾರ ಕುಂದಾಪುರ ತಾಲ್ಲೂಕಿಗೆ ನಿಗದಿಪಡಿಸಿರುವ ಅರ್ಥಿಕ ಗುರಿ ಎಷ್ಟು?

ಆ) ಸರ್ಕಾರ ಈವರೆವಿಗೆ ಯಾವುದೇ ಹಣವನ್ನು ಬಿಡುಗಡೆ ಮಾಡಿಲ್ಲ ಹಾಗೂ ಯಾವುದೇ ಮನೆಗಳು ನಿರ್ಮಾಣವಾ ಗಿರುವುದಿಲ್ಲವೆಂಬುದು ಸರ್ಕಾರದ ಗಮನಕ್ಕೆ ಬಂದಿದೆಯೇ? ಹಾಗೂ ಅದಕ್ಕೆ ಕಾರಣಗಳನ್ನು ಸಹ ಒದಗಿಸುವುದು?

ಶ್ರೀ ಹೆಚ್.ಡಿ. ರೇವಣ್ಣ (ವಸತಿ ಸಚಿವರು)

ಅ) 1997-98ರ ಅವಧಿಯಲ್ಲಿ ಆಶ್ರಯ ಯೋಜನೆಯಡಿಯಲ್ಲಿ 175 ಮನೆಗಳ ಭೌತಿಕ ಗುರಿ ಹಾಗೂ ರೂ. 35.00 ಲಕ್ಷಗಳ ಆರ್ಥಿಕ ಗುರಿ ನಿಗದಿಪಡಿಸಲಾಗಿದೆ. ಹಾಗೂ ಹೆಚ್ಚುವರಿಯಾಗಿ 200 ಮನೆಗಳ ಭೌತಿಕ ಗುರಿ ಮತ್ತು ರೂ. 40.00 ಲಕ್ಷಗಳ ಆರ್ಥಿಕ ಗುರಿ (ಪ್ರತಿ ವಿಧಾನಸಭಾ ಕ್ಷೇತ್ರಕ್ಕೆ 100 ಮನೆಗಳನ್ನು ನಿಗದಿಪಡಿಸಿರುವಂತೆ ಕುಂದಾಪುರಕ್ಕೆ ಗುರಿ ನಿಗದಿಪಡಿಸಲಾಗಿದೆ.

ಆ) 175 ಮನೆಗಳ ಪೈಕಿ 20 ಮನೆಗಳ ನಿರ್ಮಾಣ ಕಾರ್ಯ ಮುಗಿದಿದ್ದು ಉಳಿದವು ನಿರ್ಮಾಣ ವಿವಿಧ ಹಂತದಲ್ಲಿರುತ್ತದೆ. ಇದಕ್ಕಾಗಿ ರೂ. 14.00 ಲಕ್ಷ ಬಿಡುಗಡೆ ಮಾಡಿದ್ದು, ಅದು ಸಂಪೂರ್ಣ ವೆಚ್ಚವಾಗಿರುತ್ತದೆ. ಉಳಿದ 200 ಮನೆಗಳನ್ನು (ಪ್ರತಿ ವಿಧಾನಸಭಾ ಕ್ಷೇತ್ರಕ್ಕೆ 100 ಮನೆಗಳಂತೆ) ಹಂಚಿಕೆ ಮಾಡಿರುವುದಕ್ಕೆ ಫಲಾನುಭವಿಗಳ ಆಯ್ಕೆ ಕಾರ್ಯ ಪ್ರಗತಿಯಲ್ಲಿದ್ದು, 40.00 ಲಕ್ಷಗಳನ್ನು ಹುಡ್ಕೋದಿಂದ ಸಾಲ ಪಡೆದು ಬಿಡುಗಡೆ ಮಾಡಲಾಗುವುದು.

ಮಂಗಳೂರು ತಾಲ್ಲೂಕಿನಲ್ಲಿ ವಸತಿ ಮತ್ತು ನಿವೇಶನ ರಹಿತರು

124 (186) ಶ್ರೀ ಕೆ. ಜಯರಾಮಶೆಟ್ಟಿ (ಉಳ್ಳಾಲ):- ಮಾನ್ಯ ವಸತಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಮಂಗಳೂರು ತಾಲ್ಲೂಕಿನಲ್ಲಿರುವ ವಸತಿ ಮತ್ತು ನಿವೇಶನ ರಹಿತರ ಸಂಖ್ಯೆ ಎಷ್ಟು?

ಆ) ಇವರಿಗೆ ವಸತಿ ಮತ್ತು ನಿವೇಶನಗಳನ್ನು ಹಂಚಿಕೆ ಮಾಡಲು ಸರ್ಕಾರದವರು ಕೈಗೊಳ್ಳಲಿರುವ ಕ್ರಮಗಳೇನು?

ಶ್ರೀ ಹೆಚ್.ಡಿ. ರೇವಣ್ಣ (ವಸತಿ ಸಚಿವರು)

ಅ) ವಸತಿ ರಹಿತರ ಸಂಖ್ಯೆ ನಿವೇಶನ ರಹಿತರ ಸಂಖ್ಯೆ

2253 5311

ಆ) ಇವರಿಗೆ ವಸತಿ ಮತ್ತು ನಿವೇಶನಗಳನ್ನು ಹಂಚಿಕೆ ಮಾಡಲು ಸರ್ಕಾರದ ಆದೇಶ ಸಂಖ್ಯೆ:ವಇ 71 ಹೆಚ್ಎಹೆಚ್ 96 (ಭಾ) ದಿನಾಂಕ:3-3-97 ಮತ್ತು ದಿನಾಂಕ:6-10-97ರ ಪ್ರಕಾರ ತಾಲ್ಲೂಕು ಮಟ್ಟದ ವಸತಿ ಸಮಿತಿಯನ್ನು ರಚಿಸಲಾಗಿದೆ. ತಾಲ್ಲೂಕು ಮಟ್ಟದ ವಸತಿ ಸಮಿತಿಯು ದಿನಾಂಕ:8-10-97ರ ಸಮಿತಿಯಲ್ಲಿ ಈ ಕೆಳಕಂಡ ವಸತಿಗಳನ್ನು ಹಂಚಿಕೆ ಮಾಡಲಾಗಿದೆ.

1997-98ನೇ ಸಾಲಿನಲ್ಲಿ ಆಶ್ರಯ ಯೋಜನೆಯಲ್ಲಿ 375 ಮನೆಗಳನ್ನು ಇಂದಿರಾ ಆವಾಸ್ ಯೋಜನೆಯಲ್ಲಿ 103 ಮನೆಗಳನ್ನು ಹಾಗೂ ಅಂಬೇಡ್ಕರ್ ಯೋಜನೆಯಲ್ಲಿ 84 ಮನೆಗಳನ್ನು ಮಂಜೂರು ಮಾಡಲಾಗಿದೆ.